1.ರಾಮ ರಾಮ ರಾಮ್ ರಾಮ್ ರಾಮ್
ಜಯ ರಾಮ ರಾಮ ರಾಮ್ ರಾಮ್ ರಾಮ್
| ೨ಸಲ|

ದಶರಥ ನಂದನ ರಾಮ್ ರಾಮ್ ರಾಮ್
ದಶಮುಖ ಮರ್ದನ ರಾಮ್ ರಾಮ್ ರಾಮ್
|೨ಸಲ ಪಶುಪತಿ ರಂಜನ ರಾಮ್ ರಾಮ್
ರಾಮ್ ಪಾಪ ವಿಮೋಚನ ರಾಮ್ ರಾಮ್
ರಾಮ್ |೨ಸಲ|

ರಾಮ ರಾಮ ರಾಮ್ ರಾಮ್ ರಾಮ್ ಜಯ
ರಾಮ ರಾಮ ರಾಮ್ ರಾಮ್ ರಾಮ್
| ೨ಸಲ|

ಅನಾಥ ರಕ್ಷಕ ರಾಮ್ ರಾಮ್ ರಾಮ್
ಆಪತ್ಬಾಂಧವ ರಾಮ್ ರಾಮ್ ರಾಮ್
|೨ಸಲ|}ಮೈಥಿಲಿ ನಂದನ ರಾಮ್ ರಾಮ್
ರಾಮ್ ಮಾರುತಿ ವಂದಿತ ರಾಮ್ ರಾಮ್
ರಾಮ್ |೨ಸಲ|

ರಾಮ ರಾಮ ರಾಮ್ ರಾಮ್ ರಾಮ್ ಜಯ
ರಾಮ ರಾಮ ರಾಮ್ ರಾಮ್ ರಾಮ್
{೨ಸಲ

*****

2.ನವಮಾಸ ಹೊತ್ತು

ನನ್ನನು ಹೆತ್ತು

ಸಾಕಿದ ತಾಯಿಗೆ ವಂದನೆ

ಮೈಮುರಿ ದುಡಿದು

ನನ್ನನು ಸಲುಹಿ

ಬೆಳೆಸಿದ ತಂದೆಗೆ ವಂದನೆ

ವಿದ್ಯಾ ಬುದ್ದಿ

ಬಾಲ್ಯದಿ ಕಲಿಸಿ

ಹರಸಿದ ಗುರುವಿಗೆ ವಂದನೆಬಗೆ ಬಗೆ
ರೋಗವ

ವಾಸಿ ಮಾಡುವ

ವೈದ್ಯೆಗೆ ಮಾಡುವೆ ವಂದನೆ

ನಿತ್ಯದಿ ದುಡಿದು

ಅನ್ನವ ನೀಡುವ

ರೈತಗೆ ಮಾಡುವೆ ವಂದನೆ

ನಾಡಿನ ರಕ್ಷಣೆ

ನಿತ್ಯದಿ ಮಾಡುವ

ಯೋಧಗೆ ಮಾಡುವೆ ವಂದನೆ

*****

೩.

ಕುಹೂ ಕುಹೂ ನೀ ಕೋಗಿಲೆಯೆ

ನಾ ಹಾಡುವ ಹಾಡೊಂದ ಹಾಡುವೆಯಾ

ನಾ ಹೇಳುವ ಮಾತೊಂದ ಕೇಳುವೆಯಾ

ಚಿಗುರಿನ ಬನದಲಿ ನೀನಿರುವೆ

ನೀ ಕೂಗುವ ಧ್ವನಿಯಲಿ ನಾನಿರುವೆ

ಹಾಡುತ ಕುಳಿತರೆ ದಿನವೆಲ್ಲಾ ನಾ

ನೋಡುತಲಿರುವೆ ಮನವೆಲ್ಲಾ ॥೧॥

ಭಾರತ ದೇಶದ ಬಾನಿನೊಳು

ಈ ಧ್ವನಿಗಳ ಮಾರ್ದನಿಗೊಳಿಸುವೆಯಾ

ಭಾವೈಕ್ಯತೆಯನು ಮೂಡಿಸಲು ನೀ

ಅಸಮಾನತೆಯನು ಅಳಿಸುವೆಯಾ ॥೨॥

ಭೇದ ಭಾವವ ಮರೆಸುವೆಯಾ

ನೀ ರಾಷ್ಟ್ರಾಭಿಮಾನವ ತುಂಬುವೆಯಾ
ಅಂಧಕಾರದ ಜನಗಳಿಗೆ ನೀ
ಅಮೃತವಾಣಿಯ ತಿಳಿಸುವೆಯಾ ॥೩॥

೪.ಹಾಡು ಹಕ್ಕಿಗಳೆ ಹಾರಿ ಬಾನಿಗೆ ಮರದ
ಗೂಡಿನಿಂದ

ಹೊಗಿ ಚೆಲ್ಲಿರಿ ದಿಕ್ಕು ದಿಕ್ಕಿಗೂ ಒಳಗಿನ
ಆನಂದ ॥

ಕಣ್ಣ ಪಡೆದಿರಿ ಬಣ್ಣ ಪಡೆದಿರಿ ರೆಕ್ಕೆಪುಕ್ಕ
ಮಾಟ

ಕಾಲು ಬಲಿಯಿತು ಕಾಲ ಸಂದಿತು ಇನ್ನು
ಹಾರುವಾಟ ॥

ದಾರಿ ದಾರಿಯಲಿ ರೆಂಬೆ ರೆಂಬೆಯಲಿ
ಕೂತು ರಾಗ ಹಾಡಿ

ದಾರಿ ಸಾಗುವ ದಣಿದ ಜೀವಕೆ ಕೊಂಚ
ಮುದವ ನೀಡಿ ॥

ನಿಮ್ಮ ದನಿಯ ಆನಂದ ಚಿಮ್ಮಲಿ
ಕೇಳಿದವರ ಎದೆಗೆ

ಯಾವ ಹಕ್ಕಿ ಇವು ಬಂದುದೆಲ್ಲಿಂದ ಎಂಬ
ಬೆರಗು ಕವಿಗೆ ॥